09-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಂದುವರೆದ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ** 1 ಮತ್ತು 2 ನೇ ಪ್ರತಿವಾದಿಗಳ ಪರವಾಗಿ ಶ್ರೀ ಎಸ್ ಕೆ ಎಸ್ ವಕೀಲರಿಂದ.

ಎನ್ ಮತ್ತು ಎಫ್ ಬಿಂದುಗಳಲ್ಲಿ ಸರ್ವೇಯರ್ ರವರು ಕಲ್ಲು ಹಾಕಿ ಕೊಟ್ಟಿದ್ದರು. ಯಾವ ವರ್ಷದಲ್ಲಿ ಎನ್ನುವುದು ನೆನಪಿಲ್ಲ. ಸರ್ವೇ ಮಾಡಲು ನ್ಯಾಯಾಲಯದಿಂದ ಆದೇಶ ಆಗಿತ್ತು. ನಿಪಿ 5 ರಲ್ಲಿ ಎನ್ ಬಿಂದು 35 ಕಡೆ ತೋರಿಸಲಾಗಿದೆ ಮತ್ತು ಎಫ್ ಬಿಂದು 4 ಕಡೆ ತೋರಿಸಲಾಗಿದೆ . ನಿಪಿ 5 ರಂತೆ ನಕಾಶೆ ತಯಾರಿಸಲು ಹಳಿಯಾಳ ನ್ಯಾಯಾಲಯದಿಂದ ಆದೇಶ ಆಗಿತ್ತು. ಸಾಕ್ಷಿ ಮುಂದುವರೆದು ಮುಕುಂದ ಕಾಮತ ಮತ್ತು ತನ್ನ ತಂದೆಯ ನಡುವೆ ಗಡಿ ವಿಷಯವಾಗಿ ತಕರಾರು ಬಂದಾಗ ಸದರಿ ಸರ್ವೇ ಮಾಡಲಾಗಿರುತ್ತದೆ. ಸರ್ವೇ ರಿಪೋರ್ಟನಲ್ಲಿ ಎನ್ ಮತ್ತು ಎಫ್ ಬಿಂದುಗಳಲ್ಲಿ ರಸ್ತೆ ತೋರಿಸದ್ದಾರೋ ಅಥವಾ ಇಲ್ಲವೋ ಎನ್ನುವುದು ನನಗೆ ನೆನಪಿಲ್ಲ. ಶೇಖ ಎನ್ನುವ ಸರ್ವೇಯರ್ ರವರು ಎನ್ ಎಫ್ ಬಿಂದುಗಳಲ್ಲಿ ಕಲ್ಲು ಹಾಕಿ ರಸ್ತೆ ಮಾಡಿಕೊಡಿ ಎಂದು ತಿಳಿಸಿದ್ದರು.

ಮುಕುಂದ ಕಾಮತ ರವರ ವಿರುದ್ಧ ರಸ್ತೆ ವಿಚಾರವಾಗಿ ದಾವೆ ಸಲ್ಲಿಸಿರುವುದಿಲ್ಲ. ಮುಕುಂದ ಕಾಮತ ರವರ ವಿರುದ್ಧ ಸರ್ವೇ ನಂಬರ 1/2 ಹಾಗೂ 1/3 ರ ಜಮೀನಿಗೆ ಸಂಬಂಧಿಸಿ ದಾವೆ ಸಲ್ಲಿಸಿದ್ದೆವು. ಮುಕುಂದ ಕಾಮತ ರವರು ನಮ್ಮ ಜಮೀನಿನ ಗಡಿಯನ್ನು ಅತಿಕ್ರಮಿಸಿದ್ದರಿಂದ ಸದರಿ ದಾವೆಯನ್ನು ಸಲ್ಲಿಸಿದ್ದೆವು. ಸದರಿ ದಾವೆಯನ್ನು ರಸ್ತೆಯ ವಿಚಾರವಾಗಿಯೂ ಸಹ ಸಲ್ಲಿಸಲಾಗಿತ್ತು. ಸದರಿ ದಾವೆಯಲ್ಲಿ ರಸ್ತೆ ಕುರಿತು ತಕರಾರು ಇರುತ್ತದೆ ಎಂದು ನಮೂದಿಸಿದ್ದೆವೋ ಇಲ್ಲವೋ ಎನ್ನುವುದು ನೆನಪಿಲ್ಲ. ಸದರಿ ದಾವೆಯ ವಾದ ಪತ್ರ, ತೀರ್ಪು , ಡಿಕ್ರಿ ಈ ದಾವೆಯಲ್ಲಿ ಹಾಜರು ಪಡಿಸಿದ್ದು ಅದನ್ನು ನಾನು ಪರಿಶೀಲಿಸಿರುತ್ತೇನೆ. ಸದರಿ ದಾಖಲೆಗಳಲ್ಲಿ ರಸ್ತೆಯ ಬಗ್ಗೆ ನಮೂದಾಗಿದೆಯೋ ಇಲ್ಲವೋ ನೆನಪಿಲ್ಲ. ನಮ್ಮ ಮನೆಯ ಮುಂದೆ ಗೇಟ, ಸದರಿ ಗೇಟಿನಿಂದ ನೇರವಾಗಿ ಕಾಡಿನಲ್ಲಿ ಮೌಳಂಗಿ ರಸ್ತೆಗೆ ಸೇರುವ ದಾರಿಯನ್ನು ಹಾಗೂ ಆ ಬಗ್ಗೆ ವಿವರಣೆಯನ್ನು ನಿಪಿ 5 ರಲ್ಲಿ ನೀಡಲಾಗಿದೆ. ಮೇಲೆ ಹೇಳಿದ ರಸ್ತೆ ವಿವರಣೆಯ ಬಗ್ಗೆ ಮುಕುಂದ ಕಾಮತ ರವರ ವಿರುದ್ದ ಸ ಲ್ಲಿಸಲಾಗಿದ್ದ ಅಸಲು ದಾವೆ ಸಂಖ್ಯೆ 10/2001 ರಲ್ಲಿ ಹೇಳಲಾಗಿದೆಯಾ ಎಂದರೆ ಸಾಕ್ಷಿ ಸದರಿ ದಾವೆಯಲ್ಲಿ ಕೋರ್ಟ ಕಮಿಶನ್ ರವರು ಸರ್ವೇ ಸಮಯದಲ್ಲಿ ಸದರಿ ದಾರಿಯನ್ನು ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ. ನಾನು ಹೇಳುವ ದಾರಿಯು ಅರಣ್ಯ ಜಾಗದಿಂದ ಹಾದು ಹೋಗುತ್ತದೆ. ಈ ದಾವೆಯಲ್ಲಿ ಅರಣ್ಯ ಇಲಾಖೆಯನ್ನು ಪ್ರತಿವಾದಿಯನ್ನಾಗಿ ಮಾಡಿರುವುದಿಲ್ಲ. ನಾನು ಹೇಳಿದ ಮೇಲಿನ ರಸ್ತಯು ನಮ್ಮ ಮನೆಯ ಗೇಟನಿಂದ ಸುಮಾರು 200 ಮೀಟರ ಉದ್ದದ ರಸ್ತೆ

ಆಗಿರುತ್ತದೆ. ಸದರಿ ರಸ್ತೆಯು ನಮ್ಮ ಮನೆಯ ಗೇಟನಿಂದ ಸುಮಾರು 200 ಮೀಟರ ಉದ್ದ ಇದೆ ಎಂದು ನನ್ನ ವಾದಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ.

ಸದರಿ ಮೇಲೆ ಹೇಳಿದ 200 ಮೀಟರ ಉದ್ದದ ರಸ್ತಯನ್ನು ಅರಣ್ಯ ಇಲಾಖೆಯ ಡಿಎಫ್‌ಓ ರವರು ನಿರ್ಮಿಸಿ ಕೊಟ್ಟಿರುತ್ತಾರೆ. ಯಾವ ವರ್ಷದಲ್ಲಿ ಸದರಿ ರಸ್ತೆ ನಿರ್ಮಿಸಿ ಕೊಟ್ಟಿದ್ದಾರೆ ಹಾಗೂ ಡಿಎಫ್‌ಓ ರವರ ಹೆಸರು ನೆನಪಿಲ್ಲ. ಸದರಿ ರಸ್ತ ನಿರ್ಮಿಸಿ ಕೊಡಲು ಸುಮಾರು 2 – 3 ಅರಣ್ಯ ಇಲಾಖಾ ಸಿಬ್ಬಂದಿ ಬಂದಿದ್ದರು. ಈ ದಾವೆಯಲ್ಲಿ ಸದರಿ ರಸ್ತೆಯ ಉದ್ದ – ಅಗಲ ಬರೆಸಿದ್ದೇನೋ ಇಲ್ಲವೋ ನೆನಪಿಲ್ಲ. ದಾವಾ ರಸ್ತೆಯ ಚೆಕ್ಕುಬಂದಿ ವಾದ ಪತ್ರದಲ್ಲಿ ಬರೆಸಿರುತ್ತೇನೆ. ನಿಪಿ 5 ರಲ್ಲಿ ರಸ್ತೆಯ ಬಗ್ಗೆ ಯಾವುದೇ ವಿಷಯ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ 4 ನ್ನು ಈ ಪ್ರಕರಣ್ಕೆ ಅನುಕೂಲ ಆಗುವಂತೆ ನಾವೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ 200 ಮೀಟರ ರಸ್ತೆ ನಮ್ಮ ಸ್ವಂತಕ್ಕೆ ಸಂಬಂಧಿಸಿದ ರಸ್ತೆ ಆಗಿರುತ್ತದೆ. ಸದರಿ ರಸ್ತೆ ನಮ್ಮ ಸ್ವಂತ ರಸ್ತೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಸದರಿ ದಾಖಲೆ ನಿಪಿ 5 ರಂತೆ ಇರುವ ಕೋರ್ಟ ಕಮೀಶನರ್ ನಕಾಶೆ ಆಗಿರುತ್ತದೆ. ಸಾಮಾನ್ಯವಾಗಿ ಯಾವುದೇ ಒಂದು ರಸ್ತೆ ಅರಣ್ಯ ಜಾಗದಲ್ಲಿ ಹಾದು ಹೋದರೆ ಸದರಿ ರಸ್ತೆ ಅರಣ್ಯ ಇಲಾಖೆಗೆ ಸೇರಿದ ಆಸ್ತಿ ಆಗುತ್ತದೆ ಎಂದರೆ ಸರಿ. ಸದರಿ ರಸ್ತೆ ಅರಣ್ಯ ಜಾಗದಲ್ಲಿ ಇದೆ ಎಂದು ತೋರಿಸಲು ಅರಣ್ಯ ಇಲಾಖೆಯ ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ಸದರಿ ರಸ್ತೆಯನ್ನು ಈ ಮೊದಲು ಇದ್ದ ಆಲೂರು ಗ್ರಾಮ ಪಂಚಾಯತಿ ಯವರು ನಿರ್ಮಿಸಿದ್ದಾರೆ. ಸದರಿ ರಸ್ತಯನ್ನು ಪಂಚಾಯತಿ ಯವರು ನಿರ್ಮಿಸಿದ್ದಾರೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ಸದರಿ ರಸ್ತೆ ನಿರ್ಮಾಣ ಮಾಡಲು 2 ಬಾರಿ ಮಂಜೂರು ಸರ್ಕಾರದಿಂದ ಆಗಿತ್ತು. ಆದರೆ ಆ ರೀತಿ ಮಂಜೂರಾದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ.

**ಮುಂದವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೇಳಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೆ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ., ಹಳಿಯಾಳ.